ಯ್ಯಾರ್ಯಾರದೋ ಕೈಕಾಲು ಹಿಡಿದು, ಏನೇನೋ ಕೇಳುತ್ತಿದ್ದ ಮಾದೇವಿಯ ಗುಡಿಸಿಲಿಗೆ ಕರೆದುಕೊಂಡು ಬಂದು, ಜಾತ್ರೆಯದಿನ ಆ ಕತ್ತಲಲ್ಲಿ ನಡೆದ ಸಂಗತಿಯನ್ನೆಲ್ಲ ಹೇಳಿದ. ಹೇಳಿ ಅವಳ ಕೈಗೆ, ಪಾಲಯ್ಯ ಕಾನಿಗೆ ಮೆಟ್ಟಿಕೊಂಡು ಹೋಗುತ್ತಿದ್ದ ಹಳೆಯ ಮೆಟ್ಟು ಕೊಟ್ಟು, ತಲೆ ಒಡ್ಡಿ, ಮಂಡೆ ಕೂದಲು ಉದುರಿಸಲು ಕೇಳಿಕೊಂಡ. ಮಾದೇವಿ ಮೆಟ್ಟು ಹಿಡಿದು ಸಿಟ್ಟುಗೊಳ್ಳುವುದರ ಬದಲು, ದೆವ್ವ ಮೆಟ್ಟಿದವಳಂತೆ ಬಿಮ್ಮನೆ ಕೂತುಬಿಟ್ಟಳು...

ಹೆಚ್ಚು ಕಮ್ಮಿ ಆ ಹಿಂಚು ಮುಂಚಿನಿಂದಲೇ ಕಳ್ಳತನ ಬಿಟ್ಟಿದ್ದಾಗಿ, ಅಷ್ಟು ಹೊತ್ತಿಗೆ ತನ್ನ ಗ್ರಾಮದ ಗೌಡ ಸೂರನಾಯಕರು ಆಡುಮರಿಗಳನ್ನು ಕೊಡಿಸಿದ್ದಾಗಿ ಹೇಳಿದ.

ನಾನಿದ್ದು, ಈಗ ಮಾದೇವಿಗೆ ಮೂರೋ ನಾಲ್ಕು ತಿಂಗಳು ಆಗಿರಬಹುದು ಎಂದೆ. ಗಿರಿಯ ಅವಕ್ಕಾದ. ಅವನ ಮುಖದಲ್ಲಿ ನಾನಾ ಸಂದೇಹದ ಗೆರೆಗಳು ಮೂಡತೊಡಗಿದವು. ಕಣ್ಣು ಒಮ್ಮೆ ಕಿರಿದಾಗಿ ಒಮ್ಮೆ ಅಗಲವಾಗತೊಡಗಿದವು. ಏನೋ ಮಾತಾಡ ಹೋಗಿ ಕೊನೆಗೆ, ಇರಬೋದು ಕರಡಿ ಕಣಿವೆ ದೊಡ್ಡತಮ್ಮಯ್ಯನವರು ಹಾದಿಗೆಟ್ಟು ಯಾರ್ಯಾರಿಗೋ ಬಸಿರಾಗಿರುವವಳ ಯೋಚನೆ ಬಿಟ್ಟು, ಚಿರತೆ ಬಯಲಲ್ಲೇ ಇರುವ ಯಾವಳನ್ನಾದರೂ ಲಗ್ನವಾಗುವಂತೆ ತನಗೆ ಆಳಿನ ಕೈಲಿ ಹೇಳಿ ಕಳಿಸಿದ್ದರು ಎಂದ. ಯಾರಾದರೂ ಸಪೋರ್ಟು ಮಾಡುವವರಿದ್ದರೆ ತಾನು ಮಾದೇವಿಯನ್ನು ಕರೆದುಕೊಂಡು ಬಂದು ಸಾಕುವುದಾಗಿ ಹೇಳಿದ. ಅವನ ಮಾತಿನಲ್ಲಿ ಮುಗ್ಧತೆ, ನಂಬಿಕೆ, ದೃಢತೆ ಇತ್ತು.

ಚಿರತೆ ಬಯಲಿನ ಗಿರಿಯನನ್ನು ಕರೆದುಕೊಂಡು ಸಲಗನವೊಡ್ಡು ಪೊಲೀಸ್ ಠಾಣೆಗೆ ಸುದ್ದಿ ಕೊಟ್ಟು ಊರು ಸೇರುವಷ್ಟರಲ್ಲಿ ಗ್ರಾಮದೇವತೆಯ ಹಬ್ಬದ ರಂಗು ಗುಡಿಯ ಮುಂದೆ ಏರಿಬಿಟ್ಟಿತ್ತು. ಕೇರಿ ಕೇರಿಯ ಜನವೆಲ್ಲ ಪಿಳ್ಳೆ ಪಿಸುಗಿನ ಸಹಿತ ಗುಡಿಯ ಮುಂದಲಂಗಳದಲ್ಲಿಯೇ ಜಮಾಯಿಸಿಕೊಂಡಿತ್ತು. ಊರಾಚೆ ಬೀದಿಯ ಹೈದರು ತಮಟೆ ಜಡಿಯುತ್ತಿದ್ದರು.

ಆಗಲೇ ಹೊರಗಣ ಅಗ್ನಿಕುಂಡವಿಟ್ಟ ಕಂಭಕ್ಕೂ, ಗರ್ಭಾಂಕಣದ ದೇವತೆಗೂ ನೂರೊಂದು ಆರತಿ ಮುಗಿಸಿದ್ದ ಪೂಜಾರಯ್ಯ ನಡುಗುತ್ತಿದ್ದರು. ದೊಡ್ಡತಮ್ಮಯ್ಯ, ಅಂದಾನಪ್ಪ, ಕುಂಟರಂಗಯ್ಯ ಗ್ರಾಮದೇವತೆ ಪ್ರತ್ಯಕ್ಷವಾದಳೆಂಬಂತೆ ಭಯಭಕ್ತಿಗಳಿಂದ ಪೂಜಾರಯ್ಯನ ಕತ್ತಿಗೊಂದು ಹೂವಿನ ಸರ ಇಳಿಬಿಟ್ಟರು. ಲಗ್ಗೆ ಹೊಡೆದು ಕುಣಿಯುತ್ತಿದ್ದ ಪೂಜಾರಯ್ಯ ಕತ್ತಿನ ಸರವ ಕಿತ್ತೆಸೆದು ಅಂಗಳಕ್ಕೆ ನುಗ್ಗಿದರು. ಕಂಭದ ಕವೆಯ ಮೇಲಿದ್ದ ಅಗ್ನಿಕುಂಡವನ್ನು ತಬ್ಬಿ ಎತ್ತಿ ಗುಡಿಯನ್ನು ಮೂರು ಸುತ್ತು ಬಳಸಿ ಬಂದ ಮೇಲೆ ನೆರೆದ ಮಂದಿಗೆಲ್ಲ ಎತ್ತಿ ತೋರಿ ಇಟ್ಟರು. ಗುಂಪು ಸದ್ದು ಅಡಗಿಸಿ ನಿಂತಿತು. ದೊಡ್ಡತಮ್ಮಯ್ಯನವರು ಬೆಂಕಿ ಕುಂಡದೊಳಕ್ಕೆ ನಾಲ್ಕು ಅರಳು ಇಟ್ಟರು. ಅದು ಸುಟ್ಟು ಸೀಕರಿಯಾಯಿತು. ತಮ್ಮಯ್ಯನವರು ಭಯದ ಮುಖದಲ್ಲಿ 'ಕುಂಡದಾಗಿಟ್ಟ ಹೂವು ಸೀದೊಯ್ತಲ್ಲವ್ವ ತಾಯಿ ನಿನಮಕ್ಳ ಗತಿಯೇನವ್ವ' ಅಂದರು.

ಪೂಜಾರಯ್ಯ ಅದುರುತ್ತಲೇ 'ಮಗನೇ ಕೇಳು ಭೂಮಿಯಿಂದ ಬೀಜ ಮೊಳಕೆ ಬರುವಂಥ ಕಾಲದಲ್ಲಿ ಒಂದೇ ಒಂದು ಮಳೆ. ಪೈರು ಮೊಳದುದ್ದ ಬಂದು ನಿಂತಾಗ ಗಾಳಿ ಬೀಸಿದೇ ಹೊರ್ತು ಮಳೆ ಇಲ್ಲ. ನಾನಾಡದಂಥ ವಾಕ್ಯನ ಕಾಯ್ಕಂಡಿದ್ದು ನೋಡ್ರಿ' ಅಂದು ಅಪ್ಪಣೆ ಕೊಡಿಸಲು ಸುತ್ತ ನಿಂತವರೆಲ್ಲ ಭಯಗ್ರಸ್ಥರಾದರು.

'ಮಕ್ಳು ಮಾಡದಂಥಾ ತಪ್ಪ ವಟ್ಟೆ ವಳಗಡೆ ಹಾಕಬಾರ್ದೇನವ್ವ, ನಮಗೇನ್ ಗೊತ್ತು ಅರೀದ ಮಕ್ಳು. ಇಕಾ ನಿಂಗೇ ಅಂತ್ಲೇ ಬಕ್ತುರು ಯಾಪಾಟಿ ಕುರಿ ಕೋಳಿ ಆಡು ಹಿಡಕಂಡು ಬಂದವ್ರೆ. ನಿಂಗೇನ್ ಬೇಕು ಕೇಳು ತಾಯಿ. ನಮ್ಮನ್ನ ಮಾತ್ರ ಕಂಗಾಲು ಮಾಡಬ್ಯಾಡವ್ವ' ಅಂದ